VOL-5, ISSUE-1, November 15, 2019 to December 31, 2019 RNI - KARKAN24138/8-7-2014-TC ISSN-2454-678X
ಸಂಪುಟ-5, ಸಂಚಿಕೆ-1, ನವೆಂಬರ್ 15, 2019 ರಿಂದ ಡಿಸೆಂಬರ್ 31, 2019

7

# ಕನ್ನಡ ಸಾಹಿತ್ಯಕ್ಕೆ ಮುಸ್ಲಿಂ ಕಥೆಗಾರರ ಕೊಡುಗೆ

* ರಂಗಸ್ವಾಮಿ.ಎಚ್.ಟಿ

ಕನ್ನಡ ಸಾಹಿತ್ಯವು ನಡೆದು ಬಂದ ದಾರಿ, ಇಡುತ್ತಿರುವ ಹೆಜ್ಜೆಗಳು, ಬೆಳೆದು ಬಂದ ಬಗೆ, ಬಹು ಮತ್ತರವಾಗಿದೆ.ಹಿಂದಿನ ಸಾಹಿತ್ಯದಲ್ಲಿ ಕಾವ್ಯ ಪ್ರಕಾರವೊಂದೆ ಪ್ರಮುಖ ಸ್ಥಾನ ಪಡೆದಿತ್ತು. ಗದ್ಯ ಮುಖಿಯಾಗದ ಆ ಕಾವ್ಯ ಪ್ರಕಾರವು, ವಿವಿಧ ಮುಖಗಳಿಂದ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಆದರೆ, ಆಧುನಿಕ ಸಾಹಿತ್ಯ ಸಂದರ್ಭದ ಅವಧಿಯಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಚಳುವಳಿಗಳ ಮೂಲಕ ವಿವಿಧತೆಯನ್ನು, ಬಹುಮುಖ ಶ್ರೀಮಂತಿಕೆಯನ್ನು ಪಡೆದುಕೊಂಡ ಕನ್ನಡ ಸಾಹಿತ್ಯವು, ಪ್ರವಾಸ ಕಥನ, ಪ್ರಬಂಧ ಹೀಗೆ ಹತ್ತು ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ನಡೆದಿದೆ. ಅಲ್ಲದೆ ಹಲವಾರು ಭಾಷೆಗಳ ಸಾಹಿತ್ಯವನ್ನು, ಆ ಭಾಷೆಗಳ ಸಾಹಿತ್ಯ, ವಸ್ತು ವಿಷಯಗಳನ್ನೆಲ್ಲ ಅಧ್ಯಯನಿಸಿ, ಅಭಿವ್ಯಕ್ತಿಸಿ ತನ್ನಲ್ಲಿ ಅಡಗಿಸಿಕೊಂಡಿದೆ.ಭಾರತೀಯ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯವು ಪ್ರಮುಖ ಸ್ಥಾನವನ್ನು ಪಡೆದಿದೆ.

ಬಹು ದೀರ್ಘಪರಂಪರೆಯನ್ನು ಹೊಂದಿರುವ ಕನ್ನಡ ಸಾಹಿತ್ಯಕ್ಕೆ, ಅನೇಕ ಪ್ರತಿಭಾವಂತ ಸಾಹಿತಿಗಳು, ಅನರ್ಘ್ಯ ಕೊಡುಗೆಯನ್ನು ನೀಡಿದ್ದಾರೆ.ಆಳವಾದ ಅಧ್ಯಯನ, ಬಹುಮುಖಿ ಸಂಸ್ಕೃತಿಯ ಅನುಭವಗಳಿಂದ, ಭಾಷೆ, ಧರ್ಮಗಳೆಂಬ ಬೇಧವಿಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿ ಗೈದಿದ್ದಾರೆ.ಶಿಶುನಾಳ ಶರೀಫ್ ಸಾಹೇಬರಿಂದ ಪ್ರಾರಂಭವಾದ ಮುಸ್ಲಿಂ ಸಾಹಿತಿಗಳ ಪರಂಪರೆಯು, ತನ್ನ ಅಧಿಕೃತ ದಾಖಲೆಯ ಕೊಡುಗೆಯಿಂದ, ನಿಜಕ್ಕೂ ಶ್ರೀಮಂತವಾಗಿದೆ.ಮುಸ್ಲಿಂ ಲೇಖಕರು ತಮ್ಮ ಅನುಭವಗಳನ್ನು, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಅಭಿವ್ಯಕ್ತಿಸಿದ್ದಾರೆ.ಕೆಲವು ಸಾಹಿತಿಗಳ ಬರಹಗಳಲ್ಲಿ ಮುಸ್ಲಿಂ ಸಂಸ್ಕೃತಿಯನನ್ನು ಆ ಸಮುದಾಯದ ಸಂವೇದನೆಗಳನ್ನು ಗಾಢವಾಗಿ ಪರಿಚಯಿಸಿರುವುದನ್ನು ಕಾಣಬಹುದಾಗಿದೆ.

*ರಂಗಸ್ವಾಮಿ.ಎಚ್.ಟಿ, ಸಂಶೋಧಕರು ಸಂಶೋಧಕರು, ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಸ್ನಾತಕೋತ್ತರ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಅಂಬೇಡ್ಕರ್ ಬೀದಿ, ಬೆಂಗಳೂರು

Scanned with CamScanner

ಎಂಭತ್ತರ ದಶಕದ ಸಂದರ್ಭದಲ್ಲಿ ಇಸ್ಲಾಂ ಧರ್ಮ, ಮುಸ್ಲಿಂ ಸಂಸ್ಕರತಿಯ ಗಾಢವಾದ ಅನುಭವಗಳನ್ನು, ಅಲ್ಲಿನ ಸಂವೇದನೆಗಳನ್ನು ಅಪರಿಚಿತ ಲೋಕಕ್ಕೆ ಪರಿಚಯಿಸುವಲ್ಲಿ ಮತ್ತು ಹೊಸ ಸಂಸ್ಕೃತಿಯ ಅಧ್ಯಯನಕ್ಕೆ ನಾಂದಿ ಹಾಡಿದ ಹಲವಾರು ಮುಸ್ಲಿಂ ಸಾಹಿತಿಗಳು ಕೊಡುಗೆಯನ್ನು ನೀಡಿದ್ದಾರೆ.ಈ ಸಾಲಿನಲ್ಲಿ ಪ್ರಥಮ ಮಹಿಳಾ ಪ್ರತಿನಿಧಿಯಾಗಿ ಬರೆಯಲು ತೊಡಗಿದ ಶ್ರೀಮತಿ ಸಾರಾ ಅಬೂಬಕ್ಕರ್ ಅವರು ಕಾದಂಬರಿ ಕ್ಷೇತ್ರದ ಮೂಲಕ ಅತ್ಯುತ್ತಮ ಕೊಡುಗೆಯನ್ನು ನೀಡಿದ್ದಾರೆ.1984ರಲ್ಲಿ ಅವರ 'ಚಂದ್ರಗಿರಿಯ ತೀರದಲ್ಲಿ' ಮೊದಲ ಕಾದಂಬರಿಯು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಅಲಂಕರಿಸಿ, ಸಾರಾ ಅವರನ್ನು ಪರಿಚಯಿಸಿತು.ಇದುವರೆಗೆ ಬರೆದ ಅವರು ಕಾದಂಬರಿಗಳು 'ಸಹನಾ', 'ವಜ್ರಗಳು', 'ಕದನ ವಿರಾಮ', 'ಸುಳಿಯಲ್ಲಿ ಸಿಕ್ಕವರು', 'ಪ್ರವಾಹ ಸುಳಿ', 'ತಳ ಒಡೆದ ದೋಣಿ ಮತ್ತು ಮನೋಮಿ' ಅನುವಾದಿತ ಕಾದಂಬರಿಗಳನ್ನು ನೀಡಿದ್ದಾರೆ.

'ಚಪ್ಪಲಿಗಳು', 'ಪಯಣ ಮತ್ತು ಇತರ ಕಥೆಗಳು', 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು', 'ಖೆಡ್ಡಾ' ಎಂಬ ಕಥಾ ಸಂಕಲನಗಳನ್ನು 'ಅನಾವರಣ' ಮತ್ತು 'ಲೇಖನ ಗುಚ್ಛ' ಎಂಬ ವಿಮರ್ಶಾ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಗೆ 1984ರ ಸಾಹಿತ್ಯ ಅಕಾಡೆಮಿಯ ಕಾದಂಬರಿ ಪ್ರಕಾರದ ಪ್ರಶಸ್ತಿ ಮತ್ತು ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, 'ಸಹನಾ' ಕಾದಂಬರಿಗೆ ಉದಯೋನ್ಮುಖ ವರ್ಧಮಾನ ಸಾಹಿತ್ಯ ಪ್ರಶಸ್ತಿ 'ಪಯಣ ಮತ್ತು ಇತರ ಕಥೆಗಳು' ಕೃತಿಗೆ ಮಂಗಳೂರು ತಾಲೂಕಾ ಸಾಹಿತ್ಯ ಸಮ್ಮೇಳನದಲ್ಲಿ ಪ್ರಥಮ ಬಹುಮಾನ, 'ಸುಳಿಯಲ್ಲಿ ಸಿಕ್ಕವರು' ಕಾದಂಬರಿಗೆ 1995ರ ಅನುಪಮಾ ನಿರಂಜನ ಪ್ರಶಸ್ತಿ, 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು' ಕಥಾ ಸಂಕಲನಕ್ಕೆ ರತ್ನಮ್ಮ ಹೆಗ್ಗಡೆ ಮಹಿಳಾ ಸಾಹಿತ್ಯ ಪ್ರಶಸ್ತಿ, 1990ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1991 ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, 1995ರ ರಾಜ್ಯೋತ್ಸವ ಪ್ರಶಸ್ತಿ, 1994ರ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, 1998ರ ಎಚ್.ವಿ.ಸಾವಿತ್ರಮ್ಮ ದತ್ತಿನಿಧಿ ಪ್ರಶಸ್ತಿ ಹೀಗೆ ಹತ್ತು ಹಲವಾರು ಶ್ರೇಷ್ಠ ಪ್ರಶಸ್ತಿಗಳಿಗೆ ಪಾತ್ರರಾದ ಸಾರಾ ಅವರಿಗೆ ಇದೀಗ 18-1-2002ರ ಹಿರಿಯ ಪ್ರಶಸ್ತಿಗಳಲ್ಲಿ ಒಂದಾದ 'ದಾನ ಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿಯ ಗರಿ ಈ ಚಂದ್ರಗಿರಿಯ ಮುಡಿಗೇರಿದೆ.



Scanned with CamScanner

ಸಾರಾ ಅಬೂಬಕ್ಕರ ಅವರ ಕಥೆ, ಕಾದಂಬರಿಗಳೆಲ್ಲ ಸ್ತ್ರೀ ಸಂವೇದನೆಯ ಹತ್ತು ಹಲವಾರು ಮುಖಗಳನ್ನು, ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ಚಿತ್ರಿತಗೊಂಡಿವೆ. ಅವರ ಎಲ್ಲ ಬರವಣಿಗೆಗಳಲ್ಲಿ ತಮ್ಮ ಜನಾಂಗದ ಮಹಿಳೆಯರ ನೋವಿನ ಕಥೆಗಳನ್ನು ಹೇಳುವುದರ ಮೂಲಕ, ಪ್ರತಿಭಟನೆಯ ಮುಖಾಂತರ ಪುರುಷ ಸಮಾಜಕ್ಕೆ ಬುದ್ಧಿವಾದ ಹೇಳುವಲ್ಲಿ ಇವರ ದಿಟ್ಟತನವನ್ನು ಕಾಣಬಹುದಾಗಿದೆ. ಕನ್ನಡದ ಕಥೆ, ಕಾದಂಬರಿ ಕ್ಷೇತ್ರಗಳಿಗೆ ಅನನ್ಯವಾದ ಕೊಡುಗೆಯನ್ನು ಕೊಟ್ಟಿದ್ದಾರೆ.

ಸಾರಾ ಅವರ ಜೊತೆ ಜೊತೆಯಲ್ಲಿ ಬೆಳೆದು ಬಂದ ಇನ್ನೋರ್ವ ಮಹಿಳಾ ಲೇಖಕಿ ಶ್ರೀಮತಿ ಮಮ್ತಾಜ ಬೇಗಂ ಅವರು.'ಅವ್ಯಕ್ತ'ವೆಂಬ ಕಥಾ ಸಂಕಲನ, 'ಪರದೇಶಿ' ಎಂಬ ಕಾದಂಬರಿ ತರಂಗದಲ್ಲಿ ಧಾರವಾಹಿಯಾಗಿ 1989ರಲ್ಲಿ ಪ್ರಕಟಗೊಂಡಿತು.ಇವರ ಇನ್ನೊಂದು ಕಾದಂಬರಿ 'ವರ್ತುಲ' 2001ರಲ್ಲಿ ಪ್ರಕಟಗೊಂಡಿತು.ಇವರ ಸಾಹಿತ್ಯ ಕೃಷಿ ಸಂಖ್ಯೆಯಿಂದ ಕಡಿಮೆಯಾಗಿದ್ದರೂ ಅತ್ಯುತ್ತಮ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ಕನ್ನಡದಲ್ಲಿ ಪ್ರಮುಖವಾಗಿ ಕೇಳಿಬರುವ ಹೆಸರು ಬೊಳುವಾರು ಮುಹಮ್ಮದ ಕುಂಞ.ಇವರು ಕಥಾ ಸಾಹಿತ್ಯಕ್ಕೆ ಶ್ರೇಷ್ಠತಮ ಕಥಾ ಸಂಕಲನಗಳನ್ನು ನೀಡಿ ಕಥೆಗಾರರೆಂದು ಪ್ರಸಿದ್ಧಿಯನ್ನು ಪಡೆದಿದ್ದಾರೆ.1979ರಲ್ಲಿ 'ಅತ್ತ ಇತ್ತಗಳ ಸುತ್ತ ಮುತ್ತ', 'ದೇವರುಗಳ ರಾಜ್ಯದಲ್ಲಿ', 'ಅಂಕ', 'ಆಕಾಶಕ್ಕೆ ನೀಲಿ ಪರದೆ', 'ಒಂದು ತುಂಡು ಗೋಡೆ' ಎಂಬ ಐದು ಕಥಾ ಸಂಕಲನಗಳನ್ನು ನೀಡಿದ್ದಾರೆ. 'ಜೆಹಾದ್' ಎಂಬ ಕಾದಂಬರಿ (1987) ಎರಡು ಧರ್ಮಗಳ ಸಂಘರ್ಷಣೆಯ ಚಿತ್ರವನ್ನು ಅತ್ಯುತ್ತಮವಾಗಿ ವ್ಯಕ್ತಪಡಿಸಿದ್ದಾರೆ. ಮಕ್ಕಳಿಗಾಗಿ – 'ತಟ್ಟು ಚಪ್ಪಾಳೆ ಪುಟ್ಟ ಮಗು' ಕವನ ಸಂಕಲನವನ್ನು ರಚಿಸಿದ್ದಾರೆ. (1991) ಐತಿಹಾಸಿಕ ಚರಿತ್ರೆಯನ್ನೊಳಗೊಂಡ ಕೃತಿ 'ಮುನ್ನಪ್ಪ ವಯಲಾರ ಸಮರ' (1989) 'ಪಂಡಿತ ಫಕೀರ ಗಜಲ್' ನಾಟಕವನನ್ನು ಒಂದು ಸಂಪಾದನಾ ಕೃತಿ 'ದೆಹಲಿ ಕನ್ನಡ ಸಾಹಿತ್ಯ' (1994) ಸಂಪಾದಿಸಿದ್ದಾರೆ.

ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ತಮ್ಮ ಗಟ್ಟಿಯಾದ ಅನುಭವಗಳನ್ನು ಹಿಂದೂ ಮುಸ್ಲಿಂ ಸಂವೇದನೆಗಳ ಮೂಲಕ ಅಭಿವ್ಯಕ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ.ಅಂತೆಯೆ ಇವರಿಗೆ ಸಂದ ಪ್ರಶಸ್ತಿಗಳು ಅನಂತ. 'ದೇವರುಗಳ ರಾಜ್ಯದಲ್ಲಿ' ಕಥಾ ಸಂಕಲನಕ್ಕೆ 1983ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಅಂಕ' ಕಥಾ ಸಂಕಲನಕ್ಕೆ 1986ರ ಭಾರತೀಯ ಭಾಷಾ ಸಂಸ್ಥಾನ ಪ್ರಶಸ್ತಿ,



Scanned with CamScanner

ISSN-2454-678X
VOL-5, ISSUE-1, November 15, 2019 to December 31, 2019 RNI - KARKAN24138/8-7-2014-TC
ಸಂಪುಟ-5, ಸಂಚಿಕೆ-1, ನವೆಂಬರ್ 15, 2019 ರಿಂದ ಡಿಸೆಂಬರ್ 31, 2019

'ತಟ್ಟು ಚಪ್ಪಾಳೆ ಪುಟ್ಟ ಮಗು' ಶಿಶು ಸಾಹಿತ್ಯಕ್ಕೆ 1991ರ ಆರ್ಯಭಟ ಪ್ರಶಸ್ತಿ, 'ಆಕಾಶಕ್ಕೆ ನೀಲಿ ಪರದೆ' ಕಥಾ ಸಂಕಲನಕ್ಕೆ 1992ರ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಥಾ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿಗಳು ಲಭಿಸಿರುವುದು ಇವರ ಪ್ರತಿಭೆಗೆ ಸಂದ ಗೌರವವಾಗಿದೆ.

ಉತ್ತಮ ಸೃಜನಶೀಲ ಲೇಖಕರಾಗಿ ಬೆಳೆದು ಬಂದ ಫಕೀರ ಮುಹಮ್ಮದ ಕಟ್ಪಾಡಿ ಅವರು.ಮುಸ್ಲಿಂ ಸಂಸ್ಕೃತಿಯ ವಿವಿಧ ಪ್ರಮುಖ ಆಯಾಮಗಳನ್ನು ಲಕ್ಷದಲ್ಲಿರಿಸಿ, ಬರವಣಿಗೆಯ ಮೂಲಕ ಜನಪರ ಆಶಯಗಳಿಗೆ ಸ್ಪಂದಿಸುತ್ತಾರೆ.ಬದುಕಿಗೆ ಅರ್ಥ ನೀಡುವ ದೆಸೆಯಿಂದ ಸಹಿತ್ಯ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಂಡ ಕಟ್ಪಾಡಿಯವರು, ಮುಸ್ಲಿಂ ಬದುಕಿನ ದಟ್ಟವಾದ ಪರಿಚಯವನ್ನು ನೀಡಿದ್ದಾರೆ.ಅಲ್ಲಿನ ಸಾಮಾಜಿಕ ಅಸಮಾನತೆಗಳ ಕುರಿತಾಗಿ ಆತ್ಮ ವಿಶ್ವಾಸದಿಂದ ಬರೆಯುವುದಕ್ಕೆ ಪ್ರಾರಂಭಿಸಿದ ಕಟ್ಪಾಡಿಯವರು 'ಗೋರಿ ಕಟ್ಟಿಕೊಂಡವರು', 'ನೋಂಬು', 'ದಜ್ಜಾಲ' ಎಂಬ ಮೂರು ಕಥಾ ಸಂಕಲನಗಳನ್ನು, ಸರಕುಗಳು-ನೆರೆ, ಕಬ್ಬಾದ, ಎಂಬ ಕಾದಂಬರಿಗಳನ್ನು, 'ಕೇರಳದಲ್ಲಿ ಹದಿನೈದು ದಿನಗಳು' ಎಂಬ ಪ್ರವಾಸ ಕಥನವನ್ನು ಬರೆದಿದ್ದಾರೆ. 'ಕಯ್ಯೂರಿನ ರೈತ ವೀರರು' ಐತಿಹಾಸಿಕ ಚರಿತ್ರೆಯನ್ನು, ಕೋಮುವಾದದ ರಾಜಕೀಯ, ರಾಷ್ಟ್ರೀಯತೆ ಮತ್ತು ಮುಸ್ಲಿಮರು ಎಂಬ ಲೇಖನಗಳನ್ನು ಕನ್ನಡ ವಾಙ್ಮಯಕ್ಕೆ ನೀಡಿದ್ದಾರೆ. ಹೊರ ಬಂದ ಕೃತಿಗಳು ಕಡಿಮೆ ಎನಿಸಿದರೂ, ಕೆಲವು ಕೃತಿಗಳ ಮೂಲಕ ಇವರ ಅಪ್ರತಿಮ ಪ್ರತಿಭೆಯನ್ನು, ಸಾಹಿತ್ಯ ಸೇವೆಯನ್ನು ಗಮನಿಸಿ, 2001-2002ನೆಯ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.ಅಪಾರ ಅನುಭವ ಸಾಮಗ್ರಿಯನ್ನು ಪಡೆದ ಕಟ್ಪಾಡಿಯವರು, ಅಪರಿಚಿತ ಹೊಸ ನೆಲೆಗಳ ವಸ್ತುನಿಷ್ಠ ಅಭಿವ್ಯಕ್ತಿಯನ್ನು ಕೃತಿಗಳ ಮೂಲಕ ಪ್ರಾಮಾಣಿಕತೆಯಿಂದ ಪ್ರತಿಬಿಂಬಿಸುತ್ತಾರೆ.

ಒಂದು ಜನಾಂಗ, ಸಮುದಾಯದೊಳಗಿನ ಬದುಕಿನ ಚಿತ್ರಣಗಳನ್ನು ಚಿತ್ರಿಸುವಲ್ಲಿ, ಜನಸಾಮಾನ್ಯರ ಗುಡಿಸಲುಗಳಲ್ಲಿ ನಿಂತು ಅನುಭವಿಸಿದ ಅಭಿವ್ಯಕ್ತಿಯೂ ಸತ್ಯ ಬರಹಗಳಾಗುತ್ತವೆ. ಅಂತಹ ಮುಸ್ಲಿಂ ಜನಾಂಗದ, ಅಲ್ಲಿನ ಮಹಿಳೆಯರ ಒಳ ಮಿಡಿತ ತುಡಿತಗಳನ್ನು ಅರಿತು ಬರೆದವರಲ್ಲಿ ಶ್ರೀಮತಿ ಬಾನು ಮುಷ್ತಾಕ ಒಬ್ಬರಾಗಿದ್ದಾರೆ. ಇವರು 'ಬಡವರ ಮಗಳು ಹೆಣ್ಣಲ್ಲಾ' ಹಾಗೂ 'ಕುಬ್ರ' ಎಂಬ ಕಾದಂಬರಿಗಳನ್ನು 'ಹೆಜ್ಜೆ ಮೂಡಿದ ಹಾದಿ' ಮತ್ತು 'ಬೆಂಕಿ ಮಳೆ' ಎಂಬ



Scanned with CamScanner

ಎರಡು ಕಥಾ ಸಂಕಲನಗಳನ್ನು ರಚಿಸಿದ್ದಾರೆ.'ಬೆಂಕಿ ಮಳೆ' ಎಂಬ ಕಥಾ ಸಂಕಲನಕ್ಕೆ 1999ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿರುವುದು ಅವರ ಪ್ರತಿಭೆಗೆ ಸಂದ ಗೌರವವಾಗಿದೆ.

ಅದರಂತೆ ಗುಳೇದಗುಡ್ಡದ ಅಬ್ಬಾಸ ಮೇಲಿನಮನಿ ಅವರು ವಿಶೇಷವಾಗಿ ಉತ್ತರ ಕರ್ನಾಟಕದ ಉತ್ತಮ ಸಾಹಿತಿಗಳು, ಶಿಕ್ಷಕ ವೃತ್ತಿಯ ಜೊತೆಯಲ್ಲಿ ಸಾಹಿತ್ಯಕ ಪ್ರವೃತ್ತಿಯಲ್ಲಿ ನಿರತರಾದವರು.'ಕಥೆಯಾದಳು ಹುಡುಗಿ', 'ಭಾವಕ್ಯೆಬಂಧ' ಎಂಬ ಕವನ ಸಂಕಲನಗಳನ್ನು, 'ಪ್ರೀತಿಸಿದವರು', 'ಕಣ್ಣು ಮುಂದಿನ ಕಥೆ', 'ಅರ್ಧಸತ್ಯಗಳು' ಮತ್ತೊಂದು 'ಕರ್ಬಲಾ', 'ಅಬ್ಬಾಸರ ಐವತ್ತು ಕಥೆಗಳ' ಸಮಗ್ರ ಕಥಾ ಸಂಗ್ರಹವನ್ನು ಸೌಹಾರ್ದ ಸಂಸ್ಕೃತಿ ಎಂಬ ಲೇಖನ ಗುಚ್ಛವನ್ನು 'ದಾನಸಿರಿ' ಎಂಬ ಸಂಪಾದಿತ ಕೃತಿಯನ್ನು ಹೊರತಂದಿದ್ದಾರೆ.ಇವರ ಕೃತಿಗಳು ಉತ್ತರ ಕರ್ನಾಟಕದ ಹಿಂದೂ ಮುಸ್ಲಿಂ ಸಂಸ್ಕೃತಿಯ ಹಲವಾರು ಅಂಶಗಳನ್ನು, ಅಲ್ಲಿನ ಬದುಕಿನ ಅನೇಕ ಒಳನೋಟಗಳನ್ನು ವೈಚಾರಿಕವಾಗಿ ಹೇಳುತ್ತವೆ. ಅಬ್ಬಾಸ್‌ರ ಸಾಹಿತ್ಯ ರಚನೆಯ ವಸ್ತು, ಭಾಷೆಗೆ ಸಂಬಂಧಿಸಿದಂತೆ, ಯಾವ ಸಂಪ್ರದಾಯಕ್ಕೂ ಅಂಟಿಕೊಳ್ಳದೆ ಮುಕ್ತವಾಗಿ ತಮ್ಮದೆಯಾದ ಶೈಲಿಯಿಂದ ಬರೆಯುತ್ತಾರೆ.ಜನಪದ ಭಾಷೆಯ ಸೊಗಡಿನಿಂದ ರಚಿತವಾದ ಇವರ ಸಾಹಿತ್ಯವು ಜನಮನ ಗೆಲ್ಲುವಲ್ಲಿ ಯಶಸ್ವಿಯಾಗಿದೆ. ಇವರ 'ಅರ್ಧ ಸತ್ಯಗಳು' ಎಂಬ ಕಥಾ ಸಂಕಲನಕ್ಕೆ ದಿ.ಚಿಕ್ಕೋಡಿ ತಮ್ಮಣಪ್ಪ ಸಾಹಿತ್ಯ ಪ್ರಶಸ್ತಿ ಲಭಿಸಿದೆ.(1992) ಅದಲ್ಲದೆ ಇವರ 'ಮತ್ತೊಂದು ಕರ್ಬಲಾ' ಕಥಾ ಸಂಕಲನಕ್ಕೆ 1997ರ ಮಂಗಳೂರಿನ ಮಹಿಯೂದ್ದೀನ ಸಾಹಿತ್ಯ ಪ್ರತಿಷ್ಠಾ ಪ್ರಶಸ್ತಿ ಲಭಿಸಿದೆ.

ಎಚ್.ಎಸ್.ಜಾಫರ್ ಅವರ 'ಆವಿಷ್ಕಾರ' ಕಥಾ ಸಂಕಲನವು, ಎಂ.ಬಿ, ಕೊತವಾಲ ಅವರ 'ಪ್ರೇಮ ಬಂಧನ' ಕಥಾ ಸಂಕಲನ, 'ನಮನ' (ಸಂ) ಕವನ ಸಂಕಲನ, 'ಅಣ್ಣಾ-ತಮ್ಮ', 'ನವಸಾಕ್ಷರತಾ ಪುಸ್ತಕ', 'ಚಾಚಾ ನೆಹರೂಜೀ' ಸ್ಮರಣ ಸಂಚಿಕೆ, 'ವಿಚಾರ ಮಂಥನ' ಎಂಬ ಅಂಕಣ ಬರಹಗಳಿಂದ ಸಾಹಿತ್ಯ ಕೊಡುಗೆಯನ್ನು ನೀಡಿದ್ದಾರೆ. ಎಚ್.ಜಿ.ಮಹಮ್ಮದ್ ಅಲಿ ಅವರು 'ಕಂಬನಿ ತುಂಬಿದ ಕಣ್ಣು' ಎಂಬ ಕಾದಂಬರಿ, 'ಎರಡು ಮುಖಗಳು' ಎಂಬ ಕಥಾ ಸಂಕಲನವನ್ನು ನೀಡಿದ್ದಾರೆ.ಇವರೆಲ್ಲರ ಸಾಹಿತ್ಯ ಕೃಷಿ ಸಂಖ್ಯೆಯಿಂದ ಕಡಿಮೆಯಾಗಿದ್ದರೂ, ಉತ್ತಮ ಕೃತಿಗಳ ಕೊಡುಗೆಯನ್ನು ಕೊಟ್ಟಿದ್ದಾರೆ.

Scanned with CamScanner

ಕನ್ನಡ ವಾಙ್ಮಯಕ್ಕೆ ಉತ್ತಮ ಕೊಡುಗೆಯನ್ನು ನೀಡಿದವರಲ್ಲಿ ಅಬ್ದುಲ್ ರಶೀದ್ ಅವರ ಸಾಹಿತ್ಯ ಅಮೂಲ್ಯವಾಗಿದೆ.'ಹಾಲು ಕುಡಿದ ಹುಡುಗಾ' ಎಂಬ ಕಥಾ ಸಂಕಲನದಿಂದ ಚಿರಪರಿಚಿತರಾದ ಇವರು 'ನನ್ನ ಪಾಡಿಗೆ ನಾನು' ಎಂಬ ಕವನ ಸಂಕಲನ, 'ಪ್ರಾಣ–ಪಕ್ಷಿ' ಕಥಾ ಸಂಕಲನ, 'ಮಾತಿನಿಂದ ಆಚೆಗೆ' ಎಂಬ ಲೇಖನ ಗುಚ್ಛವನ್ನು ನೀಡಿದ್ದಾರೆ.1990ರಲ್ಲಿ ಪ್ರಕಟವಾದ 'ಹಾಲು ಕುಡಿದ ಹುಡುಗಾ' ಕಥಾ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.ಅದರಂತೆ 'ಪ್ರಾಣಿ ಪಕ್ಷಿ' ಎಂಬ ಕಥೆಗೆ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಬಹುಮಾನವನ್ನು ಪಡೆದುಕೊಂಡ ಕಥೆಯಾಗಿದೆ.ಇವರ ಕಥೆಗಳಲ್ಲಿ ಮಧ್ಯಮ ವರ್ಗದ ಮುಸ್ಲಿಂ ಜನಾಂಗದ ಬದುಕಿನ, ಒಳ ಲೋಕಗಳನ್ನು ಮೃದುವಾಗಿ ತೆರೆದು ತೋರಿಸಿಕೊಟ್ಟಿವೆ. ಹೀಗೆ ಸೂಕ್ಷ್ಮವಾಗಿ, ಭಾವನಾತ್ಮಕವಾಗಿ ಬರೆಯುವಲ್ಲಿನ ಇವರ ಬೌದ್ಧಿಕತೆ ಮತ್ತು ಭಾವ ತೀವ್ರತೆಯಿಂದ ಕನ್ನಡ ಸಾಹಿತ್ಯದಲ್ಲಿ ಉತ್ತಮ ಕಥೆಗಾರರೆನಿಸಿದ್ದಾರೆ.

ಅದೆ ರೀತಿ ಅದೀಬ್ ಅಖ್ತರ್ ಅವರ 'ಬೃಂದಾವನ ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನ. ಈ ಕಥಾ ಸಂಕಲನಕ್ಕೆ ಎಚ್.ಎಂ.ಟಿ.ಪ್ರಶಸ್ತಿ ದೊರೆತಿರುವುದು ಅವರ ಸಾಹಿತ್ಯ ಶಕ್ತಿಯ ಪ್ರತೀಕವಾಗಿದೆ.ಡಾ. ಎಚ್.ಆಯ್.ತಿಮ್ಮಾಪುರ ಅವರ 'ಮುತ್ತು ಕಿತ್ತವರು' ಎಂಬ ಕಥಾ ಸಂಕಲನ, 'ಹೃದಯ ತಂತಿ' ಎಂಬ ಕವನ ಸಂಕಲನ, 'ವೀಣೆ' ಸಂಪಾದಿತ ಕೃತಿ ಸಣ್ಣಾಟ ಉಪನ್ಯಾಸ ಮಾಲೆ ಮುಂತಾದ ಕೃತಿಗಳಿಂದ ಕನ್ನಡ ಸಾಹಿತ್ಯಕ್ಕೆ ಉತ್ತಮ ಕೃತಿಗಳನ್ನು ನೀಡಿದ್ದಾರೆ.ಅದರಂತೆ ಬಿ.ಎಂ.ಇದಿನಬ್ಬ ಅವರು ಹಿರಿಯ ಸಾಹಿತಿ, ಮಾಜಿ ಶಾಸಕ, ಸ್ವಾತಂತ್ರ್ಯ ಹೋರಾಟಗಾರರೂ ಆಗಿರುವ ಇವರು 'ಕಥಾ ಗೊಂಚಲು' ಎಂಬ ಕವನ ಸಂಕಲನವನ್ನು ಸಾಹಿತ್ಯ ಕೊಡುಗೆಯಾಗಿ ನೀಡಿದ್ದಾರೆ.

ಡಾ. ಸೈಯದ್ ಜಮೀರುಲ್ಲಾ ಷರೀಫ್ ಅವರು ಅಧ್ಯಾಪನ ವೃತ್ತಿಯ ಜೊತೆಗೆ ಉತ್ತಮ ಸಾಹಿತಿಗಳಾಗಿದ್ದಾರೆ.ಕವಿ, ವಿಮರ್ಶಕ, ಕಥೆಗಾರ, ಸಂಪಾದಕರಾಗಿ ಹಲವು ಪ್ರಕಾರದ ಸಾಹಿತ್ಯವನ್ನು ರಚಿಸಿದ್ದಾರೆ. 'ಭರವಸೆಗಳು' ಕವನ ಸಂಕಲನ, 'ಕಾರವಾರ ತಾಲ್ಲೂಕು ದರ್ಶನ', 'ಗೊಂಡರ ಸಂಸ್ಕೃತಿ', 'ಭಟ್ಕಳ ತಾಲ್ಲೂಕು ದರ್ಶನ', 'ನವಾಯಿತರು', ಶಿಶು ಸಾಹಿತ್ಯವನ್ನು 'ತಿರುವುಗಳು' ಕಥಾ ಸಂಕಲನವನ್ನು ಕೊಡುಗೆಯಾಗಿ ನೀಡಿದ್ದಾರೆ.ಇದಲ್ಲದೆ 'ಕಂಪನ', 'ಪಯಣ', ಸಂಪಾದಿತ ಕಥಾ ಸಂಕಲನಗಳು, 'ಸೌಹಾರ್ದ ಸಂಗಮ' ಸಂಪಾದಿತ ಕೃತಿಯನ್ನು ಮತ್ತು ಹತ್ತು ಹಲವಾರು



Scanned with CamScanner

ವಿಮರ್ಶಾ ಲೇಖನಗಳನ್ನು ರಚಿಸಿ ಹೆಸರುವಾಸಿಯಾಗಿದ್ದಾರೆ.ಇವರ ಸೇವೆಗೆ 1989ರ 'ಔಟ ಸ್ಟ್ಯಾಡಿಂಗ್ ಯಂಗ್ ಪರ್ಸನ್' ಅವಾರ್ಡ್ ಲಭಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ತೊಡಿಕಾನ್ ಅಬ್ದುಲ್ ಅವರು ಕಾದಂಬರಿಕಾರರೂ, ಕಥೆಗಾರರು ಆಗಿದ್ದಾರೆ. 'ಅಗ್ನಿಕುಂಡ', 'ಕಾಡಿದ ಕತ್ತಲೆ' ಎಂಬ ಎರಡು ಕಾದಂಬರಿಗಳನ್ನು 'ಮದರಂಗಿ' ಕಥಾ ಸಂಕಲನವನ್ನು ರಚಿಸಿ ಉತ್ತಮ ಕಥೆಗಾರರೆಂದು ಹೆಸರು ಪಡೆದಿದ್ದಾರೆ.ಇವರ 'ಮದರಂಗಿ' ಕಥಾ ಸಂಕಲನಕ್ಕೆ ಬಹುಮಾನ ಮತ್ತು 'ಔಟ ಸ್ಟ್ಯಾಡಿಂಗ್ ಯಂಗ್ ಪರ್ಸನ್ ಅವಾರ್ಡ್ ಲಭಿಸಿದೆ.ಇದೆ ಜಿಲ್ಲೆಯವರಾದ ಮುಹಮ್ಮದ್ ಕುಳಾಯಿ ಅವರು ವ್ಯಾಪಾರ ವೃತ್ತಿಯಲ್ಲಿದ್ದರೂ, ಉತ್ತಮ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.'ಶಿಕ್ಷಣ ಮತ್ತು ಮುಸ್ಲೀಮರು', 'ದರಲೇಖ' ಎಂಬ ಕೃತಿಗಳ ಜೊತೆಗೆ 'ಕುಚ್ಚಿ ಕಾಡಿನ ಕಪ್ಪು ಹುಡುಗ', 'ಕದನ ಕುತೂಹಲ' ಎಂಬ ಎರಡು ಕತಾ ಸಂಕಲನಗಳಿಂದ ಜನಪ್ರಿಯ ಕಥೆಗಾರರೆನಿಸಿದ್ದಾರೆ.

ಪಕ್ರುದ್ದೀನ್ ಇರುವೈಲ್ ಅವರು ಉತ್ತಮ ಕಥೆಗಾರರೆಂದು ಪ್ರಸಿದ್ದಿಯನ್ನು ಪಡೆದಿದ್ದಾರೆ.ಇದುವರೆಗೆ ಇವರ ಅರವತ್ತಕ್ಕೂ ಹೆಚ್ಚು ಕಥೆಗಳು, ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 'ಆಸರೆ' ಎಂಬ ನೀಳ್ಗತೆ 'ತುಷಾರ' ಪತ್ರಿಕೆಯಲ್ಲಿ ಫೆಬ್ರುವರಿ ಮತ್ತು ಮಾರ್ಚ್ ತಿಂಗಳ 2001ರಲ್ಲಿ ಎರಡು ಕಂತುಗಳಲ್ಲಿ ಪ್ರಕಟಗೊಂಡಿದೆ.'ಅಲೀಮಾ ಅಕ್ಷರ ಕಲಿತದ್ದು' ಎಂಬ ಕಥಾ ಸಂಕಲನವನ್ನು ಹೊರತಂದಿದ್ದಾರೆ.ಅಪಾರ ಅನುಭವದ ಹಿನ್ನೆಲೆಯಲ್ಲಿ ತಮ್ಮ ಜನಾಂಗದ ಸಮಗ್ರ ಚಿತ್ರಣವನ್ನು ಕಥೆಗಳ ಮೂಲಕ ಚಿತ್ರಿಸುವಲ್ಲಿ ಯಶಸ್ವಿ ಕಥೆಗಾರರಾಗಿ ಮೆರೆದಿದ್ದಾರೆ.

ಬಿ.ಎಂ.ಬಶೀರ್ ಅವರು ಕವಿಯಾಗಿ, ಕಥೆಗಾರರಾಗಿ ಪತ್ರಕರ್ತರಾಗಿ ಪ್ರಸಿದ್ದರಾಗಿದ್ದಾರೆ. ಇವರ 'ಪ್ರವಾದಿಯ ಕನಸು' ಕವನ ಸಂಕಲನಕ್ಕೆ 1997ರ ಮುದ್ದಣ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. 'ರಕ್ತಾಂಜಲಿ' ಇವರ ಇನ್ನೊಂದು ಕವನ ಸಂಕಲನ. 'ಚುಕ್ಕಿ ಕಥೆಗಳು' ಇವರ ಸಂಪಾದಿತ ಕೃತಿ. 'ಬಾಳೆ ಗಿಡಗೊನೆ ಹಾಕಿತು' ಇವರ ಕಥಾ ಸಂಕಲನವಾಗಿದೆ.ಇವರ ಸಾಹಿತ್ಯ ಕೊಡುಗೆ ಅಮೂಲ್ಯವಾದುದಾಗಿದೆ.

ಶ್ರೀಮತಿ ಡಿ.ಬಿ ರಜಿಯಾ ಅವರು ಕವಿಯತ್ರಿಯಾಗಿ ಪ್ರಸಿಧ್ಧಿ ಪಡೆದ ಮತ್ತೋರ್ವ ಮುಸ್ಲಿಂ ಲೇಖಕಿ. ಇವರು ತಮ್ಮ ಜನಾಂಗದ ಮಹಿಳೆಯರ ಸಂವೇದನೆಗಳನ್ನು, ಯಥಾವತ್ತಾಗಿ



Scanned with CamScanner

ಅಭಿವ್ಯಕ್ತ ಪಡಿಸುವಲ್ಲಿ ತಮ್ಮತನದಿಂದ ಮೆರೆದಿದ್ದಾರೆ. 'ಛಾಯೆ'(1991) 'ಕಳೆದು ಹೋಗುತ್ತೇನೆ'(1996). 'ಋಣ' ಚುಟುಕು ಸಂಕಲನ (1997) ಎಂಬ ಕವನ ಸಂಕಲನಗಳನ್ನು, 'ವಾಸ್ತವದ ಕನವರಿಕೆ' ಎಂಬ ಕಥಾ ಸಂಕಲನವನ್ನು ನೀಡಿದ್ದಾರೆ. ಮುಸ್ಲಿಂ ಸಂಸ್ಕೃತಿಯ ಆ ಜನಾಂಗದ ಅನೇಕ ಸಮಸ್ಯೆಗಳನ್ನು, ಅಲ್ಲಿನ ನೋವು ನಲಿವುಗಳ ವಿವಿಧ ಮುಖಗಳನ್ನು ಚಿತ್ರಿಸಿದ್ದಾರೆ.ಇವರ ಬರಹ ಕೌಶಲ್ಯಕ್ಕೆ ಡಾ.ದಿನಕರ ದೇಸಾಯಿ ಪ್ರತಿಷ್ಠಾನ ಪ್ರಶಸ್ತಿ, ಕರ್ನಾಟಕ ಲೇಖಿಕಿಯರ ಗೀತಾ ದೇಸಾಯಿ ದತ್ತಿ ಬಹುಮಾನ, ಕರಾವಳಿ ಲೇಖಿಕಿಯರ ಸಂಘದಿಂದ ಶ್ರೀಮತಿ ಕೃಷ್ಣಾಬಾಯಿ ದತ್ತಿ ಬಹುಮಾನ, ಶ್ರೀಮತಿ ರತ್ನಾ ಹೆಗ್ಗಡೆ ಟ್ರಸ್ಟ್ ಬಹುಮಾನ, ಹರಿಹರ ಪ್ರಸಸ್ತಿ, ಲಂಕೇಶ ಪ್ರಸಸ್ತಿ ಹೀಗೆ ಹಲವಾರು ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

ಕಿ.ಜು.ಪಾಷ ಅವರು ಯುವ ಕಥೆಗಾರರಾಗಿ ಅನೇಕ ಬಿಡಿ ಕಥೆಗಳನ್ನು ರಚಿಸಿದ್ದಾರೆ. ಇವರ 'ನಮಾಜು' ಕಥೆಗೆ ಸಂಕ್ರಮಣ ಕಥಾ ಸ್ಪರ್ಧೆಯಲ್ಲಿ 1996ರ ಪ್ರಥಮ ಬಹುಮಾನ ಲಭಿಸಿದೆ.ಪ್ರಾರಂಭದಲ್ಲಿಯೆ ಬಹುಮಾನಕ್ಕೆ ಪಾತ್ರರಾದ ಪಾಷಾ ಅವರು, ಉತ್ತಮ ಕಥೆಗಾರರಾಗುವ ಎಲ್ಲ ಲಕ್ಷಣಗಳನ್ನು ಹೊಂದಿದ್ದಾರೆ.

ಹೀಗೆ ಮುಸ್ಲಿಂ ಕಥೆಗಾರರು ತಮ್ಮ ಕೃತಿಗಳ ಮೂಲಕ ತಮ್ಮ ಅದ್ಭುತ ಪ್ರತಿಭೆಯಿಂದ ಮೆರೆದಿದ್ದಾರೆ.ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ವಸ್ತು, ಶೈಲಿ, ತಂತ್ರ, ಪಾತ್ರಗಳ ಮೂಲಕ ಕಥೆ ಕಾದಂಬರಿ, ಕವನ, ವಿಮರ್ಶೆ ಮುಂತಾದ ಹಲವಾರು ಪ್ರಕಾರಗಳಲ್ಲಿ ಬರೆದು, ಅತ್ಯುತ್ತಮ ಸಾಹಿತ್ಯ ಕೊಡುಗೆಯನ್ನು ನೀಡಿದ್ದಾರೆ. ಇದಲ್ಲದೆ ಮುಸ್ಲಿಂ ಸಾಹಿತಿಗಳು ಕನ್ನಡ ಸಾಹಿತ್ಯದ ಮೂಲಕ ಅಪರಿಚಿತವಾಗಿದ್ದ, ಇಸ್ಲಾಂ ಧರ್ಮದ ತತ್ತ್ವ ಸಿದ್ಧಾಂತಗಳನ್ನು, ಪರಿಮಿತ ಆವರಣದೊಳಗೆ ಬದುಕುತ್ತಿರುವ ಮುಸ್ಲಿಂ ಜನಾಂಗವನ್ನು, ಅಲ್ಲಿನ ಕಟ್ಟುಪಾಡು, ಆಚರಣೆ, ಪದ್ಧತಿ, ಮೂಢ ನಂಬಿಕೆಗಳಿಂದಾಗುವ ದುಷ್ಪರಿಣಾಮಗಳನ್ನು ಆ ಜನಾಂಗವು ಅನುಭವಿಸುತ್ತಿರುವ ನೋವು ನಲಿವುಗಳನ್ನು, ವಿಶೇಷವಾಗಿ ಮಹಿಳೆಯಯರ ಸ್ಥಿತಿಗತಿಗಳನ್ನ, ಪ್ರತಿಭಟನೆಯಂತಹ ವಸ್ತು ನಿಷ್ಠ ಸಂಗತಿಗಳನ್ನು ಹೇಳುವಲ್ಲಿ ಉರ್ದು ಶಬ್ದಗಳ ಬಳಕೆಯಿಂದ ತಮ್ಮ ಅನುಭವದ ಪರಿಪಾಕದಿಂದ ಸರಳ ಸುಂದರವಾದ ಶೈಲಿಯಿಂದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿಗೈದು, ಅನರ್ಘ್ಯ ಕೊಡುಗೆಯನ್ನು ನೀಡಿದ್ದಾರೆ.

Scanned with CamScanner

ಶೋಷಿತ ಪರ ನಿಲುವು, ಜೀವೋನ್ಮುಖಿ ಧೋರಣೆ, ವೈಚಾರಿಕ ಹರಹನ್ನೊಳಗೊಂಡು ಸೃಜನಾತ್ಮಕ ಯಶಸ್ಸಿನ ಸಾರ್ಥಕ ಪ್ರಯತ್ನಗಳಾಗುವ ಕಥೆಗಳಲ್ಲಿ ಮಹಿಳಾ ಸಾಹಿತ್ಯದ ಹೊಸ ಶೀಲತೆಯನ್ನು ಗುರುತಿಸಬಹುದು.ಈ ಸಂಕಲನದ ಉಳಿದ ಕಥೆಗಳು ವೈಚಾರಿಕತೆಯನ್ನು ಹೊಂದಿಯೂ ವಾಚಾಳಿತನವನ್ನು ಪಡೆಯುವುದು ಸಾರಾ ಅವರ ಬರವಣಿಗೆಯ ಮಿತಿಯಾಗುತ್ತದೆ.

## ಪರಾಮರ್ಶನ ಗ್ರಂಥಗಳು


| ಲೇಖಕರು | ಪುಸ್ತಕ, ಪ್ರಕಾಶಕರು |
|---|---|
| 1. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ | ನಾಡೋಜ ಸಾರಾ ಅಬೂಬಕ್ಕರ್ ಚಂದ್ರಗಿರಿ ಪ್ರಕಾಶನ, ಮಂಗಳೂರು 2015 |
| 2. ಡಾ. ಸಾರಾ ಅಬೂಬಕ್ಕರ್ | ಸಾಹಿತ್ಯಕ್ಕೊಂದು ದಾರಿದೀಪ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 2012 |
| 3. ಡಾ. ಸಾರಾ ಅಬೂಬಕ್ಕರ್ | ಹೇಟೆಗಳು ಕೂಗಬಾರದು! (ಲೇಖನ ಸಂಗ್ರಹ) ಚಂದ್ರಗಿರಿ ಪ್ರಕಾಶನ, ಮಂಗಳೂರು 2017 |
| 4. ಸಾರಾ ಅಬೂಬಕ್ಕರ್ | ಸಂದೇಹದ ಸುಳಿಯಲ್ಲಿ (ಸಮಗ್ರ ಕಥೆಗಳು) ಚಂದ್ರಗಿರಿ ಪ್ರಕಾಶನ, ಮಂಗಳೂರು 2013 |




Scanned with CamScanner